4) ಬಾಕಿ ಇರುವ ಎಲ್ಲಾ 74 ಅರ್ಜಿಗಳನ್ನು ಆಯುಧಗಳನ್ನು ಪರಿಶೀಲಿಸಿದ ಕೂಡಲೇ ಮುಂದಿನ ಅವಧಿಗೆ ನವೀಕರಿಸಲಾಗುವುದು.

ನೆಲಮಂಗಲ ತಾಲ್ಲೂಕಿನಲ್ಲಿರುವ ಕಲಾವಿದರಿಂದ ಮಾಸಾಶನಕ್ಕಾಗಿ ಬಂದ ಅರ್ಜಿಗಳ ಬಗ್ಗೆ.

839 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಿಂದ ಕಲಾವಿದರಿಂದ ಮಾಸಾಶನಕ್ಕಾಗಿ 1980ರಿಂದ ಇಲ್ಲಿಯವರೆಗೆ ಎಷ್ಟು ಮನವಿಗಳು ಬಂದಿವೆ?

ಆ) ಇವುಗಳಲ್ಲಿ ಎಷ್ಟಕ್ಕೆ ಮಂಜೂರಾತಿ ದೊರಕಿದೆ?

ಶ್ರೀ ಎಸ್. ರಮೇಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ ಸಚಿವರು)

ಅ) 39

ಆ) 16 ಜನರಿಗೆ

ಆಂಗ್ಲೋ ಇಂಡಿಯನ್ ಜನಾಂಗದ ಏಳಿಗೆಯ ಬಗ್ಗೆ

152 -ಶ್ರೀ ಡೆರಿಕ್ ಎಂ. ಫುಲ್‌ಇನ್‌ಫಾ (ನಾಮ ನಿರ್ದೇಶನ ಹೊಂದಿದವರು): ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಆಂಗ್ಲೋ ಇಂಡಿಯನ್ ಸಮುದಾಯದಲ್ಲಿ ಶೇಕಡಾ 90ಕ್ಕಿಂತ ಹೆಚ್ಚಿನವರು ಬಡತನ ರೇಖೆಗಿಂತ ಕೆಳಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

2) ಶೇಕಡಾ 40 ರಿಂದ 50 ರಷ್ಟು ಈ ಸಮುದಾಯದ ಜನರ ಸ್ಥಿತಿ ತುಂಬಾ ಕೆಳಮಟ್ಟದಲ್ಲಿರುವುದು ಮತ್ತು ಇವರಿಗೆ ತಕ್ಷಣದ ಪುನರ್ವಸತಿ ಕಾರ್ಯಕ್ರಮದ ಅವಶ್ಯಕತೆ ಇದೆ ಎಂಬುದು ನಿಜವೇ?

3) ಹಾಗಿದ್ದಲ್ಲಿ ಸರ್ಕಾರದ ಈ ಜನಾಂಗದವರಿಗೆ ತುರ್ತು ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಿ, ಮೇಲಕ್ಕೆತ್ತಲು ಕ್ರಮ ಕೈಗೊಳ್ಳುವುದೇ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು)

1) ಇಲ್ಲ

2) ಉದ್ಭವಿಸುವುದಿಲ್ಲ

3)ಆಂಗ್ಲೋ ಇಂಡಿಯನ್ ಸಮುದಾಯದ ಜನರನ್ನು ಧಾರ್ಮಿಕ ಅಲ್ಪಸಂಖ್ಯಾತರೆಂದು ಪರಿಗಣಿಸಲಾಗಿದೆ ಮತ್ತು ಕುಟುಂಬದ ವಾರ್ಷಿಕ ಆದಾಯ ರೂ.6000.00ಕ್ಕಿಂತ ಮೀರದಿದ್ದಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಇದರ ಮೂಲಕ ಸೌಲಭ್ಯಗಳನ್ನು ಪಡೆಯಬಹುದು.

ಆಂಗ್ಲೋ ಇಂಡಿಯನ್ ಜನಾಂಗವನ್ನು ಹಿಂದುಳಿದ ಪಟ್ಟಿಗೆ ಸೇರಿಸುವ ಬಗ್ಗೆ

551 - ಶ್ರೀ ಡೆರಿಕ್ ಎಂ. ಫುಲ್‌ಇನ್ ಫಾ (ನಾಮನಿರ್ದೇಶನ ಹೊಂದಿದವರು): ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 3ನೇ ಹಿಂದುಳಿದ ವರ್ಷಗಳ ಆಯೋಗದ ವರದಿಯ ಬಗ್ಗೆ ರಚಿಸಲಾಗಿರುವ ಸಂಪುಟ ಉಪ ಸಮಿತಿಗೆ ಅಖಿಲ ಭಾರತ ಪ್ರಗತಿಪರ ಆಂಗ್ಲೋ ಇಂಡಿಯನ್

ಸಾಮಾಜಿಕ ಸಾಂಸ್ಕೃತಿಕ ಶೈಕ್ಷಣಿಕ ಮತ್ತು ಆರ್ಥಿಕ ಕಲ್ಯಾಣ ಸಂಘದವರು, ಆಂಗ್ಲೋ ಇಂಡಿಯನ್ ಸಮುದಾಯದವರನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸುವ ಸಲುವಾಗಿ ಮನವಿಯನ್ನು ಸಲ್ಲಿಸಿರುತ್ತಾರೆಯೇ?

ಆ) ಸರ್ಕಾರವು ಆಂಗ್ಲೋ ಇಂಡಿಯನ್‌ರ ಅತಿ ಹಿಂದುಳಿದಿರುವಿಕೆಯನ್ನು ಗಮನಿಸಿದೆಯೇ?

ಇ) ಹಾಗಿದ್ದಲ್ಲಿ, ಸದರಿ ಸಮುದಾಯದ ಏಳಿಗೆಗಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):

ಅ) ಹೌದು

ಆ) ಹೌದು

ಇ) ಭಾರತ ಸಂವಿಧಾನದ ಅನುಚ್ಛೇದ 15 (1) ಮತ್ತು 16 (4) ರಂತೆ ಶೈಕ್ಷಣಿಕ ಔದ್ಯೋಗಿಕ ಸೌಲಭ್ಯಗಳನ್ನು ಆಂಗ್ಲೋ ಇಂಡಿಯನ್ನ 'ಇ' ಗುಂಪಿನಡಿಯಲ್ಲಿ ಪಡೆಯಬಹುದಾಗಿದೆ. ಆಂಗ್ಲೋ ಇಂಡಿಯನ್ ಸಮುದಾಯದ ಜನರನ್ನು ಧಾರ್ಮಿಕ ಅಲ್ಪಸಂಖ್ಯಾಯಾತರೆಂದು ಪರಿಗಣಿಸಲಾಗಿದೆ ಮತ್ತು ಕುಟುಂಬದ ವಾರ್ಷಿಕ ಆದಾಯ ರೂ.6000.00ಗಳನ್ನು ಮೀರದಿದ್ದಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಇದರ ಮೂಲಕ ಸೌಲಭ್ಯಗಳನ್ನು ಪಡೆಯಬಹುದಾಗಿದೆ.

ಕೆಂಗೇರಿ ಹೋಬಳಿ ಹಲಗೇವಡಯರ ಹಳ್ಳಿಯಲ್ಲಿನ ಸಾರಾಯಿ ಅಂಗಡಿಯ ಬಗ್ಗೆ

548 - ಶ್ರೀ ಪಿ.ಸಿ. ಸಿದ್ದಣ್ಣಗೌಡರ್ (ಕಲಘಟಗಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿಯ ಹಲಗೇವಡೆಯರ ಹಳ್ಳಿಯಲ್ಲಿ ಸಾರಾಯಿ ಅಂಗಡಿಯೊಂದು ಇದೆಯೇ?

ಆ) ಹಾಗಿದ್ದಲ್ಲಿ, ಪರವಾನಗಿಯನ್ನು ಯಾವಾಗ ನೀಡಲಾಯಿತು.

ಇ) ಈ ಅಂಗಡಿಯು ಹರಿಜನ ಕಾಲೋನಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಮೇಲಿನ ಸಾರಾಯಿ ಅಂಗಡಿಯನ್ನು ಬೇರೆ ಯಾವುದಾದರೂ ಸ್ಥಳಕ್ಕೆ ಸ್ಥಳಾಂತರಿಸಲು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರು ಮತ್ತು ಇತರರ ಮನವಿಗಳನ್ನೇನಾದರೂ ಸರ್ಕಾರವು ಸ್ವೀಕರಿಸಿದೆಯೆ.

ಉ) ಹಾಗಿದ್ದಲ್ಲಿ, ಮೇಲಿನ ಸಾರಾಯಿ ಅಂಗಡಿಯನ್ನು ಬೇರೆ ಸ್ಥಳಕ್ಕೆ ಬದಲಾಯಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳು.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು):

ಅ) ಹೌದು

ಆ) ದಿನಾಂಕ 1-7-1990 ರಂದು ಪರವಾನಗೆಯನ್ನು ನೀಡಲಾಗಿದೆ.

ಇ) ಇಲ್ಲ

ಈ) ಹೌದು

ಉ) ಸದರಿ ಸಾರಾಯಿ ಅಂಗಡಿಯನ್ನು ಆಕ್ಷೇಪಣೆ ಇಲ್ಲದೆ ಬೇರೆ ಸ್ಥಳಕ್ಕೆ ಬದಲಾಯಿಸುವಂತೆ ಅಬಕಾರಿ ಅಧೀಕ್ಷಕರು ದಿನಾಂಕ 19-11-90 ರಂದು ಸಂಬಂಧಿಸಿದ ಸಾರಾಯಿ ಗುತ್ತಿಗೆದಾರರಿಗೆ ನೋಟೀಸ್ ನೀಡಿರುತ್ತಾರೆ.